ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ.ಒ. ಬಿ. ಜೆ ವಕೀಲರಿಂದಃ</u>**

ನನ್ನ ಜನ್ಮ ದಿನಾಂಕ 11.06.1986 ಇರುತ್ತದೆ. ನಾನು 10ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಪ್ರಸ್ತುತ ಯಾವುದೇ ಉದ್ಯೋಗ ಮಾಡುವುದಿಲ್ಲ. ಮುಂಚೆ ಕೀ ರಿಪೇರಿ ಮಾಡುವ ಕೆಲಸ ಮಾಡುತ್ತಿದ್ದೆ.

ಅಪಘಾತದ ಸಮಯದಲ್ಲಿ ನಾನು ಓಡಿಸುತ್ತಿದ್ದ ಮೋಟಾರ್ ಸೈಕಲ್ ನನ್ನ ತಮ್ಮನ ಹೆಸರಿಗೆ ಇರುತ್ತದೆ. ಅದರ ನಂಬರ KA -49V-5217. ನನ್ನ ತಮ್ಮನ ಹೆಸರು ರಾಜು ಸಂತುನಾಥ ಕರಗದಾರ. ಆತನನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಸದರಿ ಮೋಟಾರ್ ಸೈಕಲ್ ಗೆ ವಿಮೆ ಇತ್ತು. ಸದರಿ ವಿಮೆ ಕಂಪನಿಯನ್ನು ಪಕ್ಷಗರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ನಿಜ.

ಅಪಘಾತದ ದಿನ ನಾನು ಮೇಲೆ ಹೇಳಿದ ಮೋಟಾರ್ ಸೈಕಲ್ ಮೇಲೆ ಒಬ್ಬನೇ ಹೋಗುತ್ತಿದ್ದೆನು. ಆ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ. ಅಪಘಾತದ ಸಮಯದಲ್ಲಿ ಟಾಟಾ ಮ್ಯಾಜಿಕ ಚಾಲಕನು ತನ್ನ ವಾಹನವನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದನು. ಸಾಕ್ಷಿ ಮುಂದುವರೆದು ರಸ್ತೆಯ ಮೇಲೆ ನಿಲ್ಲಿಸಿದ್ದನು ಎಂದು ನುಡಿಯುತ್ತಾರೆ. ಸದರಿ ದಿನ ನಾನು ನನ್ನ ಮೋಟಾರ್ ಸೈಕಲ್ ಅತೀ ಜೋರಾಗಿ , ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಬದಿಯಲ್ಲಿ ನಿಂತಿದ್ದ ಟಾಟಾ ಮ್ಯಾಜಿಕ ವಾಹನ ನಂಬರ KA-49/1734 ನೇದ್ದಕ್ಕೆ ಡಿಕ್ಕಿಪಡಿಸಿರುತ್ತೇನೇಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಸಂಪೂರ್ಣ ನಿಷ್ಕಾಳಜಿತನದ ಚಾಲನೆಯಿಂದ ಸಂಭವಿಸಿರುತ್ತದೆಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿ ನಿಂದ ಸಂಭವಿಸಿರುತ್ತದೆಂದು ಪೊಲೀಸರು ನನ್ನ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದು

ಟಾಟಾ ಮ್ಯಾಜಿಕ ವಾಹನದ ಚಾಲಕನು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದು ಅದರ ಆಧಾರದ ಮೇಲೆ ಪೊಲೀಸರು ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ಅಪಘಾತದ ಬಗ್ಗೆ ನಾನು ದೂರು ನೀಡಿಲ್ಲ ಎಂದರೆ ನಿಜ. ಸದರಿ ಅಪಘಾತದ ಬಗ್ಗೆ ಟಾಟಾ ಮ್ಯಾಜಿಕ ವಾಹನದ ಚಾಲಕನು ದೂರು ನೀಡಿರುತ್ತಾನೆಂದರೆ ನಿಜ. ಪೊಲೀಸರು ನನ್ನ ವಿರುದ್ಧ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆಂದು ನಾನು ಅದನ್ನು ಪ್ರಶ್ನಿಸಿ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ನಿಜ. ಟಾಟಾ ಮ್ಯಾಜಿಕ ವಾಹನದ ಚಾಲಕ ನನ್ನ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾನೆಂದು ನಾನು ಅದನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಯಾವುದೇ ದೂರು ಸಲ್ಲಿಸಿರುವುದಿಲ್ಲ ಎಂದರೆ ನಿಜ.

ಸದರಿ ಅಪಘಾತದ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸದರಿ ಅಪಘಾತವು ಟಾಟಾ ಮ್ಯಾಜಿಕ ವಾಹನದ ಚಾಲಕನ ತಪ್ಪಿನಿಂದ ಸಂಭವಿಸಿರುತ್ತದೆಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ಅಪಘಾತದಲ್ಲಿ ನನ್ನ ಬಲಗೈ ಮತ್ತು ಎಡಗಾಲು ಮೊಣಕಾಲು ಮುರಿದಿದ್ದು, ತಲೆಗೆ ಪೆಟ್ಟಾಗಿರುತ್ತದೆ. ನನಗೆ ಅಪಘಾತದಲ್ಲಿ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ನನಗೆ ಆಗಿರುವ ಗಾಯಗಳನ್ನು ನೋಡಿದರೆ ಅದರ ಚಿಕಿತ್ಸೆಗಾಗಿ ರೂ.10-15 ಸಾವಿರ ರೂ. ಖರ್ಚು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಹೆಚ್ಚಿಗೆ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

ವೈದ್ಯರು ನನಗೆ ಒಳ್ಳೆಯ ಚಿಕಿತ್ಸೆಯನ್ನು ನೀಡಿದ್ದರಿಂದ ನಾನು ಸಂಪೂರ್ಣವಾಗಿ ಗುಣಮುಖನಾಗಿರುತ್ತೇನೆಂದರೆ ಸರಿಯಲ್ಲ. ನನಗೆ ಪ್ರಸ್ತುತ ಯಾವುದೇ ಶಾಶ್ವತ ದೈಹಿಕ ನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಸಹ ನನ್ನ ಎಲ್ಲಾ ದಿನನಿತ್ಯದ ಕಾರ್ಯಗಳನ್ನು ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನನಗೆ ದೈಹಿಕ ನ್ಯೂನತೆ ಉಂಟಾಗಿದ್ದು, ಯಾವುದೇ ಕೆಲಸವನ್ನು ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರವೂ ಸಹ ಪುನಃ ಫಾಲೋ ಆಪ್ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವೈದ್ಯರು ನನಗೆ ಫಿಜಿಯೋಥೆರಿಪಿ ಚಿಕಿತ್ಸೆಯ ಬಗ್ಗೆ ಸೂಚಿಸಿರುವುದಿಲ್ಲ. ಆದ್ದರಿಂದ ನಾನು ಫಿಜಿಯೋಥೆರಿಪಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಸಂಭವಿಸಿದ್ದರಿಂದ ಎದುರುದಾರನ ವಿರುದ್ಧ ನಾನು ಪರಿಹಾರ ಕೇಳಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ವಿಮಾ ಕಂಪನಿಯಿಂದ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳುಳ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ